# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 27-09-2022

### ಜನವಾಡಾ ಪೊಲೀಸ ಠಾಣೆ: ಯು.ಡಿ.ಆರ್ ಸಂಖ್ಯೆ: 20/2022 ಕಲಂ. 174 ಸಿ.ಆರ್.ಪಿ.ಸಿ :-

ದಿನಾಂಕ: 26/09/2022 ರಂದು 20 00 ಗಂಟೆಗೆ ಕಂಗಟಿ ಶಿವಾರದಲ್ಲಿ ಕ್ವಾರಿಯ ನೀರಿನಲ್ಲಿ ಮುಳುಗಿ ಮೃತ್ತಪಟ್ಟಿರುವ ಬಗ್ಗೆ ಮಾಹಿತಿ ತಿಳಿದು ಕೂಡಲೆ ಬೀದರ ಸರಕಾರಿ ಆಸ್ಪತ್ರೆಗೆ ಪಿಎಸ್ಐ ರವರು ಬಂದು ಮೃತರ ಶವ ಪರಿಶೀಲಿಸಿ ಆಸ್ಪತ್ರೆಯಲ್ಲಿ ಹಾಜರಿದ್ದ ಮೃತ ಆನಂದಾ ಇವರ ಗಂಡನಾದ ಸಂಜುಕುಮಾರ ತಂದೆ ಸುಭಾಷ ಪರೀಟ್ ಸಾ: ಕಂಗಟಿ ಗ್ರಾಮ ರವರಿಗೆ ವಿಚಾರಿಸಲಾಗಿ ಸದರಿಯವರ ನಿಡೀದ ಸಾರಾಂಶವೇನೆಂದರೆ, ನಾನು ಇಸ್ತ್ರಿ ಕೆಲಸ ಮಾಡಿಕೊಂಡು ಉಪಜೀವಿಸುತ್ತೇನೆ ದಿನಾಂಕ: 26/09/2022 ರಂದು ಸಾಯಂಕಾಲ 1630 ಗಂಟೆ ಸುಮಾರಿಗೆ ಬಟ್ಟೆ ಒಗೆಯಲು ಬಂದಿದ್ದ ನನ್ನ ಹೆಂಡತಿ ಆನಂದಾ, ನನ್ನ ತಮ್ಮನ ಹೆಂಡತಿ ಸುನಿತಾ ಇವರು ಬಟ್ಟೆ ಒಗೆದ ನಂತರ ಕೈಕಾಲು ತೊಳೆದುಕೊಳ್ಳುವಾಗ ಅದೇ ವೆಳೆಗೆ ಬಂದಿದ್ದ ನನ್ನ ಮಗ ಪ್ರಜ್ವಲ ಹಾಗು ತಮ್ಮನ ಮಗ ನಾಗಶೆಟ್ಟಿ ಇವರು ಕೈ ಕಾಲು ತೊಳೆಯಲು ಸದರಿ ಕ್ವಾರಿಯ ನೀರಿನಲ್ಲಿ ಹೋದಾಗ ಆಕಸ್ಮಿಕವಾಗಿ ನಾಗಶೆಟ್ಟಿ ಅವನ ಹಿಂದೆ ಪ್ರಜ್ವಲ್ ಇವರು ಆಕಸ್ಮಿಕವಾಗಿ ಕಾಲು ಜಾರಿ ನೀರಿನಲ್ಲಿ ಮುಳುಗುವಾಗ ನನ್ನ ಹೆಂಡತಿ ಆನಂದಾ ಹಾಗು ತಮ್ಮನ ಹೆಂಡತಿ ಸುನಿತಾ ಇವರು ಅವರಿಬ್ಬರಿಗೆ ಹೊರಗೆ ತೆಗೆಯಲು ಹೋಗಿ ತಾವು ನನ್ನ ಹೆಂಡತಿ ಆನಂದಾ, ಸುನಿತಾ, ಪ್ರಜ್ವಲ ಹಾಗು ನಾಗಶೆಟ್ಟಿ ಇವರು ನೀರಿನಲ್ಲಿ ಮುಳುಗಿರುತ್ತಾರೆ. ನಂತರ ಅಲ್ಲಿರುವವರ ಸಹಾಯದಿಂದ ನೀರಿನಲ್ಲಿ ಮುಳುಗಿದ್ದ 1] ಆನಂದಾ ಗಂಡ ಸಂಜುಕುಮಾರ ವಯ: 30 2] ಸುನಿತಾ ಗಂಡ ಮಂಜುಕುಮಾರ ಪರೀಟ್, 3] ಪ್ರಜ್ವಲ್ ತಂದೆ ಸಂಜುಕುಮಾರ ಪರೀಟ್ 12 ಇವರಿಗೆ ಹೊರಗೆ ತೆಗೆದಿದ್ದು ನಾಗಶೆಟ್ಟಿ ತಂದೆ ಮಂಜುಕುಮಾರ ವಯ: 10 ಈತನು ಸಿಕ್ಕಿರುವುದಿಲ್ಲ. ನಂತರ ಈ ಮೇಲ್ಕಂಡ ಮೂರು ಜನರಿಗೆ ಖಾಸಗಿ ವಾಹನದಲ್ಲಿ ಬೀದರ ಜಿಲ್ಲಾ ಸರಕಾರಿ ಆಸ್ಪತ್ರೆಗೆ ತಂದಾಗ ವೈದ್ಯಾಧಿಕಾರಿಗಳು ಪರಿಶೀಲಿಸಿ ರಾತ್ರಿ 8;40 ಗಂಟೆಗೆ ಮೃತಪಟ್ಟ ಬಗ್ಗೆ ತಿಳಿಸಿರುತ್ತಾರೆ. ದಿನಾಂಕ: 26/09/2022 ರಂದು ಸಾಯಂಕಾಲ 1630 ಗಂಟೆಯ ಸುಮಾರಿಗೆ ನಮ್ಮೂರ ಮನೋಹರ ತಂದೆ ಶೆಂಕ್ರೆಪ್ಪಾ ರವರ ಹೊಲದ ಕ್ವಾರೆಯ ನೀರಿನಲ್ಲಿ ಆಕಸ್ಮಿಕವಾಗಿ ಮುಳುಗಿ ಮೃತಪಟ್ಟ ನನ್ನ ಹೆಂಡತಿ ಆನಂದಾ, ನನ್ನ ತಮ್ಮನ ಹೆಂಡತಿ ಸುನಿತಾ, ಮಗ ಪ್ರಜ್ವಲ್ ಇವರ ಸಾವಿನಲ್ಲಿ ಯಾರ ಮೇಲೆ ಯಾವುದೆ ರೀತಿಯ ಸಂಶಯ ಇರುವುದಿಲ್ಲ. ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

### ಬೇಮಳಖೇಡಾ ಪೊಲೀಸ ಠಾಣೆ: ಪ್ರಕರಣ ಸಂಖ್ಯೆ :47/2022 ಕಲಂ. 379 ಐಪಿಸಿ :-

ದಿನಾಂಕಃ 26-09-2022 ರಂದು ಮುಂಜಾನೆ 11:00 ಗಂಟೆಗೆ ಫಿರ್ಯಾದಿ ಶ್ರೀ ಶಿವರಾಜ ತಂದೆ ಬಸವರಾಜ ಬೂದೆರ ಸಾಃ ಮರಕುಂದಾ ಇವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೆನಂದರೆ ದಿನಾಂಕಃ19-09-2022 ರಂದು ರಾತ್ರಿ 8-00 ಗಂಟೆಯ ಸುಮಾರಿಗೆ ನನ್ನ ಬಜಾಜ ಪಲ್ಸರ ದ್ವಿಚಕ್ರ ವಾಹನ ನಂ ಕೆಎ-38, ಎಕ್ಸ-6928 ನೇದರ ಹೆಂಡಲ್ ಲಾಕ ಮಾಡಿ ನಮ್ಮ ಮನೆ ಎದುರಿಗೆ ನಿಲ್ಲಿಸಿ ನಾನು

ನಮ್ಮ ಮನೆಯಲ್ಲಿ ಮಲಗಿಕೊಂಡಿರುತ್ತೆನೆ ನಂತರ ಮರುದಿನ ದಿನಾಂಕಃ 20-09-2022 ರಂದು ಮುಂಜಾನೆ 6-00 ಗಂಟೆಯ ಸುಮಾರಿಗೆ ಎದ್ದು ನನ್ನ ದ್ವಿಚಕ್ರ ವಾಹನವನ್ನು ನೋಡಲು ನನ್ನ ಬಜಾಜ ಪಲ್ಸರ ದ್ವಿಚಕ್ರ ವಾಹನ ಕಾಣಲಿಲ್ಲಾ ಸದರಿ ನನ್ನ ಬಜಾಜ ಪಲ್ಸರ ದ್ವಿಚಕ್ರ ವಾಹನವನ್ನು ದಿನಾಂಕಃ19-09-2022 ರಂದು ರಾತ್ರಿ 8-00 ಗಂಟೆಯಿಂದ ದಿನಾಂಕಃ20-09-2022 ರಂದು ಬೆಳ್ಳಗ್ಗೆ 06-00 ಗಂಟೆಯ ಮಧ್ಯದ ಅವಧಿಯಲ್ಲಿ ನಮ್ಮ ಮನೆಯ ಎದುರಿಗೆ ನಿಲ್ಲಿಸಿದ ನನ್ನ ಬಜಾಜ ಪಲ್ಸರ ದ್ವಿ ಚಕ್ರ ವಾಹನ ನಂ ಕೆಎ-38, ಎಕ್ಸ-6928 ನೇದರ ಅಂ ಕಿ 60,000/ರೂ ನೇದನ್ನು ಯಾರೂ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಬೀದರ ಗ್ರಾಮಾಂತರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 61/2022 ಕಲಂ. 279, 337 ಐಪಿಸಿ:-**

ದಿನಾಂಕ 26/09/2022 ರಂದು 1715 ಗಂಟೆಗೆ ಬೀದರ ಸರಕಾರಿ ಆಸ್ಪತ್ರೆಯಿಂದ ಎಮ್ ಎಲ್.ಸಿ ಇದೇ ಅಂತ ತಿಳಿಸಿದ ಮೇರೆಗೆ ಬೀದರ ಸರಕಾರಿ ಆಸ್ಪತ್ರೆಗೆ ಹೋಗಿ ಎಮ್ ಎಲ್.ಸಿ ಪತ್ರ ಸ್ವೀಕರಿಸಿಕೊಂಡು ಆಸ್ಪತ್ರೆಯಲ್ಲಿದ ಗಾಯಾಳು ಶಿವರಾಮ ತಂದೆ ಗಂಗು ರಾಠೋಡ ವಯ- 40 ರ್ಷ ಜಾ|| ಲಮಾಣಿ ಉ|| ಸಹಾಯಕ ಸಾ|| ಅಲಿಪೂರ ತಾಂಡಾ ತಾ|| ಚಿಟ್ಟಗುಪ್ಪಾ ರವರ ಸಾರಾಂಶವೆನೆಂದರೆ ನಾನು ಬೀದರ ನಾರಂಜಾ ಸಕ್ಕರೆ ಕರ್ಖಾನೆಯಲ್ಲಿ ಫೀಲ್ಡ ಸಹಾಯಕ ಅಂತ ಕೆಲಸ ಮಾಡಿಕೊಂಡಿರುತ್ತೆನೆ. ದಿನಾಂಕ 26/09/2022 ರಂದು ಸಾಯಾಂಕಾಲ 4 ಗಂಟೆಯ ಸುಮಾರಿಗೆ ನಾನು ನನ್ನ ಮೋಟಾರ ಸೈಕಲ್ ನಂ ಕೆ.ಎ 39ಎಲ್ 0379 ನೇದ್ದರ ಮೇಲೆ ಬೀದರದಿಂದ ನಮ್ಮೂರಿಗೆ ಹೊಗುವಾಗ ವೆಟರನರಿ ಕಾಲೇಜ ಮುಂದುಗೆಡೆ ಬೀದರ ಕಮಠಾಣಾ ರಸ್ತೆಯ ಮೇಲೆ ಹಿಂದಿನಿಂದ ಒಂದು ಮೋಟಾರ ಸೈಕಲ ಚಾಲಕನು ತನ್ನ ಮೋಟಾರ ಸೈಕಲ ಅತೀ ವೇಗ ಮತ್ತು ನಿಷ್ಕಾಳಜಿಯಿಂದ ಚಲಾಯಿಸಿಕೊಂಡು ಬಂದು ನನಗೆ ಅಪಘಾತಪಡಿಸಿ ಅವರು ಸಹ ಕೇಳಗೆ ಬಿದಿದ್ದು, ಅಪಘಾತದಿಂದ ನನಗೆ ರಕ್ತಗಾಯ ಆಗಿರುತ್ತದೆ. ನನಗೆ ಅಪಘಾತಪಡಿಸಿ ಮೋಟಾರ ಸೈಕಲ ಮೇಲೆ ಇಬ್ಬರು ಇದ್ದು ಚಾಲಕನಿಗೆ ರಕ್ತಗಾಯ ಆಗಿದ್ದು ಇರುತ್ತದೆ, ಇವನಿಗೆ ಹೆಸರು ರಾಮಚಂದ್ರು ಸಾ|| ತಾಂಡೂರ ಅಂತ ತಿಳಿಸಿದನು ಮತ್ತು ಇವನ ಹಿಂದೆ ಕುಳಿತವನಿಗೆ ಸಹ ಗಾಯವಾಗಿರುತ್ತದೆ. ಇವರ ಮೋಟಾರ ಸೈಕಲ್ ನಂ ಎಪಿ-11 ಎಆರ್ 9306 ಇರುತ್ತದೆ ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಬಗದಲ್ ಪೊಲೀಸ್ ಠಾಣೆ: ಪ್ರಕರಣ ಸಂಖ್ಯೆ: 74/2022 ಕಲಂ. 279, 283, 337, 338 ಐಪಿಸಿ:-**

ದಿನಾಂಕ 26.09.2022 ರಂದು 1300 ಗಂಟೆಗೆ ಫಿರ್ಯಾಧಿ ನಾಗೇಂದ್ರು ತಂದೆ ಪೀರಪ್ಪಾ ಬೀರನಳ್ಳಿ, ವಯ: 35, ಜಾತಿ: ಕಬ್ಬಲಿಗ, ಉ: ಕಂಡಕ್ಟರ್ ಸಾ|| ಚಾಂಗಲೇರಾ ರವರ ಸಾರಾಂಶವೆನೆಂದರೆ ನಾನು ಕೆ.ಎಸ್.ಆರ್.ಟಿ.ಸಿ ಬಸ ಡಿಪೋ ನಂ 2 ರಲ್ಲಿ ಡಿಕಂಸಿ-1152 ಅಂತ ಕೆಲಸ ಮಾಡಿಕೊಂಡಿರುತ್ತೇನೆ. ದಿನಾಂಕ 26.09.2022 ರಂದು ಮುಂಜಾನೆ ಚಾಂಗಲೇರಾದಿಂದ ಬೀದರಗೆ ಹೋಗಿ ಬೀದರದಿಂದ

ಬಗದಲಗೆ ಬಂದು ಬಗದಲದಿಂದ ಬೀದರಗೆ ಹೋಗಲು ಸಮಯ ಮುಂಜಾನೆ 8:10 ಗಂಟೆಗೆ ಸಿಸರ್ಿ ಕ್ರಾಸ ಹತ್ತಿರದ ಬಸನಿಲ್ದಾಣದ ಹತ್ತಿರ ಪ್ರಯಾಣಿಕರಿಗೆ ನಿಂತಿದ್ದು ಅವರನ್ನು ಬಸಿನಲ್ಲಿ ತೆಗೆದುಕೊಳ್ಳಲು ಡ್ರೈವರ ತಿಪ್ಪಣ್ಣಾ ಬಸ ರಸ್ತೆಯ ಮೇಲೆ ನಿಲ್ಲಿಸಿದ್ದಾಗ, ಮನ್ನಾಏಖೇಳಿ ಕಡೆಯಿಂದ ಬೀದರ ಕಡೆಗೆ ಹೋಗುತ್ತಿದ್ದ ಕಾರ ನಂ ಟಿಎಸ್15ಯುಡಿ7871 ನೇದರ ಚಾಲಕ ತನ್ನ ಕಾರನ್ನು ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅದೇ ರೀತಿ ಚಟ್ನಳಿ ಕಡೆಯಿಂದ ಸರ್ಸಿ ಕ್ರಾಸ್ ಕಡೆಗೆ ಇನ್ನೊಂದು ಮೋಟಾರ ಸೈಕಲ ಎಪಿ28ಬಿಜೆ4600 ನೇದರ ಹಿಂದೆ ಒಬ್ಬ ಯುವತಿಗೆ ಕೂಡಿಸಿಕೊಂಡು ತನ್ನ ಮೋಟಾರ ಸೈಕಲನ್ನು ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದ ಮೋಟಾರ ಸೈಕಲಗೆ ಡಿಕ್ಕಿ ಮಾಡಿ ರಸ್ತೆಯ ಮೇಲೆ ನಿಂತಿದ್ದ ನಮ್ಮ ಬಸ್ ನಂ ಕೆಎ38ಎಫ್970 ನೇದಕ್ಕೆ ಡಿಕ್ಕಿ ಮಾಡಿರುತ್ತಾರೆ. ನಂತರ ಬಸನಿಂದ ಹೊರಗೆ ಬಂದು ನೋಡಲು ಕಾರ ನಂ ಟಿಎಸ್15ಯುಡಿ7871 ನೇದರ ಸವಾರನ ಹೆಸರು ವಿಚಾರಿಸಲು ಸತೀಷ ಅಂತ ತಿಳಿಸಿ ಅವರು ಫಾಸ್ಟರ್ ಇದ್ದು ಔರಾಧ(ಎಸ್) ಗ್ರಾಮದವರಿದ್ದರು, ಮೋಟಾರ ಸೈಕಲ ನೇದರ ಸವಾರನ ಹೆಸರು ವಿಚಾರಿಸಲು ದೇವಿಂದ್ರ ತಂದೆ ಹುಸೆನಪ್ಪಾ ಸಾ|| ಚಟನ್ನಳಿ, ಅಂತ ತಿಳಿಸಿದ್ದು ಅವರಿಗೆ ಎಡಕಾಲ ಪಾದದ ಹತ್ತಿರ ರಕ್ತಗಾಯವಾಗಿರುತ್ತದೆ. ಹಾಗೂ ಮೋಟಾರ ಸೈಕಲ ಹಿಂದೆ ಕುಳಿತವಳ ಹೆಸರು ರೋಹಿಣಿ ತಂದೆ ದೇವಿಂದ್ರ ಸಾ|| ಚಟನ್ನಳಿ ಇದ್ದು ಅವಳಿಗೆ ಎಡ ಭುಜ ಹತ್ತಿರ ಗುಪ್ತಗಾಯವಾಗಿರುತ್ತದೆ. ಆಗ ನಾನು ಮತ್ತು ನಮ್ಮ ಡ್ರೈವರ ನರಸಪ್ಪಾ ಹಾಗೂ ಕಾರ ಚಾಲಕ ಸತೀಷ ಮೂವರು ಕೂಡಿ ಒಂದು ಖಾಸಗಿ ವಾಹನದಲ್ಲಿ ಗಾಯಗೊಂಡ ದೇವಿಂದ್ರ ಮತ್ತು ರೋಹಿಣಿ ಇವಳಿಗೆ ಚಿಕಿತ್ಸೆ ಕುರಿತು ಬೀದರ ಸರಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿರುತ್ತೇವೆ. ನಂತರ ಠಾಣೆಗೆ ಬಂದು ದಿನಾಂಕ 26.09.2022 ರಂದು 1300 ಗಂಟೆಗೆ ಠಾಣೆಗೆ ಬಂದು ದೂರು ನೀಡಿರುತ್ತೇನೆ ಅಂತ ಇದ್ದ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಬಸವಕಲ್ಯಾಣ ಸಂಚಾರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 54/2022 ಕಲಂ. 279, 337 ಐಪಿಸಿ:-**

ದಿನಾಂಕ 26/09/2022 ರಂದು 12 :00 ಫಿರ್ಯಾದಿ ಶ್ರೀ ತಿರುಪತಿ ತಂದೆ ಗಂಗರಾಮ ಬಾರಂಭಾಯಿ, ವಯ : 40 ವರ್ಷ, ಜಾ : ಕೋಳಿ, ಉ : ಒಕ್ಕಲುತನ, ಸಾ : ಹೇರೂರ(ಕೆ), ತಾ : ಚಿತ್ತಾಪೂರ, ಜಿ : ಕಲಬುರಗಿ. ರವರ ದೂರಿನ ಸಾರಂಶವೆನೆAದರೆ, ದಿನಾಂಕ 25/09/2022 ರಂದು ಸಾಯಂಕಾಲ ನಮ್ಮ ಚಿಕ್ಕಪ್ಪ ಬಸಂತ ಹಾಗೂ ನಮ್ಮೂರ ಗುಂಡಪ್ಪಾ ವಾಲೆ, ಅವರ ಹೆಂಡತಿ ಲಕ್ಷ್ಮಿಂಮಬಾಯಿ, ಶಾಂತಾಬಾಯಿ ಗಂಡ ಕಲ್ಯಾಣರಾವ ಹಾಗೂ ನಮ್ಮ ಚಿಕ್ಕಪ್ಪನ ಪರಿಚಯದ ನಾಗಪ್ಪಾ ತಂದೆ ರಾಯಪ್ಪಾ ಹಲಗೆ, ಸಾ : ವಟವಟ್ಟಿ ಮತ್ತು ಆಕಾಶ ತಂದೆ ಅಶೋಕ ಡೊಕ್ಕನೂರ ವಯ : 17 ವರ್ಷ, ಸಾ : ವಟವಟ್ಟಿ ಎಲ್ಲರು ಕೂಡಿಕೊಂಡು ತುಳಜಾಪೂರ ದೇವಿ ದರ್ಶನಕ್ಕೆ ಹೋಗುವದಿದೆ ನಿಮ್ಮ ಕ್ರೂಸರ್ ಜೀಪ್ ನಲ್ಲಿ ಹೋಗಿ ಬರುತ್ತೆವೆ ಅಂತಾ ನಮ್ಮ ಕ್ರೂಸರ್ ಜೀಪ ನಂ ಕೆಎ-26-ಎಮ್-1552 ನೇದು ನನ್ನ ಮಗ ರೋಹಿತ ಈತನು ಚಲಾಯಿಸಿಕೊಂಡು ತುಳಜಾಪೂರಕ್ಕೆ ಹೋಗಲು ಬಿಟ್ಟಿದ್ದು ನಮ್ಮ ಚಿಕ್ಕಪ್ಪ ಬಸಂತ ಇವರು ಘಟನೆ ಬಗ್ಗೆ ತಿಳಿಸಿದ್ದೆನೆಂದರೆ, ನಾವು ಕ್ರೂಸರ್ ಜೀಪನಲ್ಲಿ ರಾ.ಹೆ ನಂ 65 ರ ಮುಖಾಂತರ ತುಳಜಾಪೂರ ಕಡೆಗೆ ಹೋಗುವಾಗ ನಿಮ್ಮ ಮಗ ರೋಹಿತ ಈತನು ಕ್ರೂಸರ್ ಜೀಪನ್ನು ಅತಿವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿ ಸಮಯ 08:00 ಪಿ.ಎಮ್ ಗಂಟೆ ಸುಮಾರಿಗೆ ಮುಡಬಿ ಕ್ರಾಸ್ ಹತ್ತಿರ

ಕ್ರೂಸರ್ ನಿಯಂತ್ರಣ ತಪ್ಪಿ ಡಿವೈಡರ್ ಗೆ ಡಿಕ್ಕಿ ಮಾಡಿರುತ್ತಾನೆ , ಅಪಘಾತದಿಂದ ನಾಗಪ್ಪಾ ಹಲಗೆ ಈತನಿಗೆ ಬಲಕಾಲು ಮೊಳಕಾಲಿನ ಕೆಳಗೆ ಗುಪ್ತಗಾಯ, ಬಲಗಡೆ ಸೊಂಟದಲ್ಲಿ ಗುಪ್ತಗಾಯವಾಗಿರುತ್ತದೆ, ಹಾಗೂ ಆಕಾಶ ಈತನಿಗೆ ಬೆನ್ನಿನಲ್ಲಿ ಗುಪ್ತಗಾಯವಾಗಿರುತ್ತದೆ ಇವರಿಬ್ಬರಿಗೆ ಅಂಬುಲೆನ್ಸದಲ್ಲಿ ಬಸವಕಲ್ಯಾಣ ಸರಕಾರಿ ಆಸ್ಪತ್ರೆಗೆ ಕಳುಹಿಸಿರುತ್ತೆವೆ, ಬೇರೆ ಯಾರಿಗೂ ಯಾವುದೆ ಗಾಯಗಳಾಗಿರುವದಿಲ್ಲಾ, ಅಂತಾ ತಿಳಿಸಿರುತ್ತಾರೆ ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.